## ಹಲ್ಲೆಲೂಯ ಸ್ತುತಿ  ಮಾಡಿರಿ ನಮ್ಮ

ಹಲ್ಲೆಲೂಯ ಸ್ತುತಿ  ಮಾಡಿರಿ ನಮ್ಮ
ಯೇಸುವಿಗೆ ಸ್ತುತಿ ಮಾಡಿರಿ

ಹಾ . . . ಹಲ್ಲೆಲೂಯ ಹಲ್ಲೆಲೂಯ ಹಲ್ಲೆಲೂಯ . . .
ಹಾ . . . ಹಲ್ಲೆಲೂಯ ಹಲ್ಲೆಲೂಯ ಹಲ್ಲೆಲೂಯ . . .

ಶಿಲುಬೆಯ ಯಜ್ಞದಿ ನಿನ್ನ
ರಕ್ತವ ಸುರಿಸಿದಿ
ಪಾಪ ನಿವಾರಿಸಿ ಶುದ್ದೀಕರಿಸಿ
ರಕ್ಷಣೆ  ನೀಡಿದಿ

ನನ್ನ ಜೀವಿತದಿ ಸದಾ
ನಿನ್ನನೆ ಸ್ಮರಿಸುವೆನು
ನಿನ್ನಾತ್ಮ ಹೊಂದಿ, ನಿನ್ನ ಚಿತ್ತ ಅರಿತು
ಬಾಳುವೆ ನಾನೆಂದು

ಯೇಸುವ ನಂಬಿರಿ ನಿಜ
ರಕ್ಷಣೆ ಹೊಂದಿರಿ
ನಿತ್ಯ ಭಾಗ್ಯವ ಪಡೆಯಿರಿ ಎಂಬ
ವಾರ್ತೆಯ ಸಾರುವೆನು

ತೀರಲು ಭೂಯಾತ್ರೆ ನಿನ್ನ
ಬಳಿ ನಾನು ಬರುವೆನು
ನಿತ್ಯ ಬಿಡಾರದಿ ನಿನ್ನಯ ಸ್ತುತಿಸುವೆ
ನಿತ್ಯವು ವಾಸಿಸುವೆ